SRI MALLIKARJUN KHARGE (Minister of State for Primary and Secondary Education).—

(*a*) Yes.

(*b*) Government do not propose to recognise the equivalence

ಶ್ರೀ ಬಿ. ಸತ್ಯನಾರಾಯಣಸಿಂಗ್.—ಕನ್ನಡ ಸಾಹಿತ್ಯ ಪರಿಷತ್ತಿನವರು ನೀಡಿದ ರತ್ನ ವಿದ್ಯಾರ್ಹತಾ ಪ್ರಮಾಣಪತ್ರವನ್ನು ಡಿಗ್ರಿ ವಿದ್ಯಾಅರ್ಹತೆಗೆ ಸಮಾನತೆಯನ್ನು ಕೊಟ್ಟು ಮಾನ್ಯತೆಗೊಳಿಸಲು ಸಾಧ್ಯವಾಗುವುದಿಲ್ಲವೆಂದು ಉತ್ತರವಲ್ಲಿ ಹೇಳಿರುತ್ತೀರಿ, ಇದಕ್ಕೆ ಇರುವ ತೊಂದರೆಯಾದರೂ ಏನು ಸ್ವಾಮಿ?

† ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರತ್ನ ಪರೀಕ್ಷೆ ಕೇವಲ ಒಂದು ವರ್ಷದ್ದು ಇರುತ್ತದೆ. ಆದರೆ ಡಿಗ್ರಿ ಕೋರ್ಸ್ 4 ವರ್ಷದ್ದು ಇರುತ್ತದೆ. ಇದು ಕೇವಲ ಒಂದು ವರ್ಷದ್ದಾಗಿರುವುದರಿಂದ ಇದನ್ನು ಪದವಿ ವಿದ್ಯಾರ್ಹತೆಗೆ ಸಮಾನವಾಗಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಬೇರೆ ರೀತಿ ಸಹಾಯ ಮಾಡುವುದಿದ್ದರೆ ಅವರ ಬಗ್ಗೆ ಪರಿಶೀಲನೆ ಮಾಡುವುದಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಆರೀತಿ ಸಾಧ್ಯವಾಗದಿದ್ದರೆ ಆರ್ಥಿಕ ದೃಷ್ಟಿಯಿಂದ ಏನಾದರೂ ಪರಿಹಾರವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.—ಅದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಮಂತ್ರಿಗಳು ಡಿಗ್ರಿಕೋರ್ಸಿಗೆ ಸಮಾನತೆಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಕೊನೆಪಕ್ಷ ಡಿಪ್ಲೊಮೋ ಕೋರ್ಸಿಗಾದರೂ ಸಮಾನತೆಯನ್ನು ಕೊಡುವ ಯೋಜನೆ ಮಾಡುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಅದರ ಬಗ್ಗೆಯೂ ಆಲೋಚನೆ ಮಾಡುತ್ತೇವೆ.

Holiday on Birthday of Basava

525. SRI S.Y. PATIL (Sindgi).—Will the Chief Minister be pleased to state.—

(*a*) w' ether there is any proposal before Government to declare a Government holiday on the birthday of Basava, the Social Reformer.

(*b*) if so, when Government will take a final decisi n in the matter?

SRI H. CHANNABASAPPA (Minister for health on behalf of Sri Devaraj Urs (Chief Minister)

(*a*) Yes.

(*b*) Final decision will be taken while declaring holiday for the next year, *i.e.*, 1978

ಶ್ರೀ ಎಸ್.ಪೈ. ಪಾಟೀಲ್.—ಶ್ರೀ ಬಸವಣ್ಣನವರು ಸಮಾಜಸುಧಾರಕರು, ಧರ್ಮಉದ್ಧಾರಕರು, ಗಾಂಧೀಜಿಯವರಂತೆ ರಾಷ್ಟ್ರೋದ್ಧಾರಕರು. ವಚನ ಸಾಹಿತಿಗಳು ಎನ್ನುವುದು ಸರ್ಕಾರಕ್ಕೆ ಗೊತ್ತಿಲ್ಲವೆ?

† ಶ್ರೀ ಎಚ್ ಎಂ. ಚನ್ನಬಸಪ್ಪ,—ಗೊತ್ತಿದೆ.

ಶ್ರೀ ಎಸ್.ಮೈ. ಪಾಟೀಲ್.—ಅಷ್ಟು ಗೊತ್ತಿದ್ದರೆ ಸಾಕು. ಇವರ ಜನ್ಮ ದಿನವನ್ನು ರಜಾ ದಿನವನ್ನಾಗಿ ರಾಜ್ಯಾದ್ಯಂತ ಮುಂಜೂರು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದರ ಸಾಧ್ಯ ಸಾಧ್ಯತೆಯನ್ನು ನೋಡಿಕೊಂಡು, ಮುಂಜೂರು ಮಾಡಬೇಕೆಂದು ಕಂಡುಬಂದರೆ ಮಾಡುತ್ತೇವೆ, ಇಲ್ಲದಿದ್ದರೆ ಇಲ್ಲ.

ಶ್ರೀ ಎಸ್.ಮೈ. ಪಾಟೀಲ್.—ಬನವಣ್ಣನವರು ಮಹಾಪುರುಷರು, ಸಮಾಜೋದ್ಧಾರಕರು ಎಂದು ತಿಳಿದುಕೊಂಡು, ಅವರ ಜನ್ಮದಿನವನ್ನು ರಜಾದಿನವನ್ನಾಗಿ ಮಾಡತಕ್ಕಂಥಾದ್ದು ಇದ್ದರೆ ಮಾಡುತ್ತೇವೆ ಇಲ್ಲದಿದ್ದರೆ ಇಲ್ಲ ಎನ್ನುವ ಉತ್ತರ ಏತಕ್ಕೆ?

ಶ್ರೀ ಟಿ ಎಂ. ಮುಂಜುನಾಥ್ — ಅನೇಕ ರಾಷ್ಟ್ರ ನಾಯಕರ ಸ್ಮರಣಾರ್ಥವಾಗಿ ಇವರ ಜನ್ಮ ದಿನಗಳನ್ನು ರಜಾದಿನವನ್ನಾಗಿ ಪೋಷಣೆ ಮಾಡಿದ್ದಾರೆ. ಹೀಗೆ ಪೋಷಣೆ ಮಾಡಲು ಪಾಲಿಸ ಬೇಕಾದ ಅಂಶಗಳಾವುವು. ಮತ್ತು ಬನವಣ್ಣನವರ ಜನ್ಮದಿನವನ್ನು ರಜಾದಿನವನ್ನಾಗಿ ಪೋಷಿಸಲು ಆ ಅಂಶಗಳು ಕಂಡುಬರುವುದಿಲ್ಲವೆ?

ಶ್ರೀ ಎಚ್.ಎಂ ಚನ್ನಬಸಪ್ಪ —ಅರ್ಜಿಯನ್ನು ಅವರು ಕೊಟ್ಟಿದ್ದಾರೆ, ಅದರ ಮಹತ್ವವನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಟಿ.ಎಂ ಮುಂಜುನಾಥ್.—ತಾವು ಯಾವ ಸನ್ನಿವೇಶ, ನಂದರ್ಭಗಳನ್ನು ಯೋಚನೆ ಮಾಡುತ್ತಿದ್ದೀರಾ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಇದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಅದರ ಮಹತ್ವವಿನ್ನು ಇದೆ, ಇದು ಎಷ್ಟು ಜನಕ್ಕೆ ಸಂಬಂಧಪಟ್ಟದ್ದು ಇವನ್ನು ಮಾಡತಕ್ಕಂಥಾದ್ದು ಸರಿಯೇ ಇದೆಲ್ಲ ಅನೇಕ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಕೆ ಆರ್ ಶ್ರೀನಿವಾಸಲು ನಾಯ್ಡು.—ಹನ್ನೊಂದು, ಹನ್ನೆರಡನೆಯ ಶತಮಾನದಲ್ಲಿಯೇ ಶ್ರೀ ಬನವಣ್ಣನವರು ಕಾಯಕವೇ ಕೈಲಾಸವೆಂದು ಘೋಷಿಸಿದರು, ಬಹುಶಃ ಈ ಮನೆಯಲ್ಲಿ ಅದು ಯಾರಿಗೂ ಇರುವುದಿಲ್ಲವೆಂದು ಭಾವಿಸುತ್ತೇನೆ. 1978ನೇ ಇಸವಿಯಾದರೂ ಪರಿಶೀಲನೆ ಮಾಡುತ್ತೇವೆಂದು ವಿಳಂಬ ಮಾಡುತ್ತಿರುವುದು ಸೂಕ್ತವಲ್ಲ. ದಯವಿಟ್ಟು ತಮ್ಮ ಕಾಲದಲ್ಲಿಯೇ ಇದನ್ನು ಮಾಡಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ದಯವಿಟ್ಟು ಒಪ್ಪಿಕೊಳ್ಳಿ ನಿಮಗೆ ಒಳ್ಳೆಯ ಹೆಸರು ಸಿಗುತ್ತದೆ.

ಶ್ರೀ ಎಚ್ ಎಂ. ಚನ್ನಬಸಪ್ಪ.—ವಿಚಾರ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಏನು ವಿಚಾರ ಮಾಡುತ್ತಿರಿ?

ಶ್ರೀ ಎ ಶರಣಪ್ಪ.—ಸ್ವೇಚ್ಛೆ ರೀ ಅರ್ಗನೈಸ್ ಆಗುವುದಕ್ಕೆ ಮುಂಚೆ 1956ನೇ ಇಸವಿಗೆ ಮೊದಲು ನಿಜಾಮ್ ರಾಜ್ಯದಲ್ಲಿ ಹೈದರಾಬಾದ್ ಇದ್ದಾಗ ಬನವಣ್ಣನವರ ಜನ್ಮದಿನೋತ್ಸವವನ್ನು ಜನರಲ್ ಹಾಲಿಡೆಯಾಗಿ ಡಿಕ್ಲೇರ್ ಮಾಡಿದ್ದರು ಅವರಂತೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೂ ಈ ಒಂದು ವಿಷಯದಲ್ಲಿ ವಿಚಾರ ಮಾಡಲಾಗದಿರುವುದಕ್ಕೆ ಕಾರಣವೇನು?

1—30 ಪಿ ಎಂ.

ಶ್ರೀ ಎಚ್.ಎಂ. ಚನ್ನಬಸಪ್ಪ.—ಹಿಂದೆ ಏನೇನು ನಡವಳಿಕೆಗಳು ಕರ್ನಾಟಕದಲ್ಲಿ ನಡೆದಿತ್ತು ಎನ್ನತಕ್ಕಂಥ ವಿಷಯಗಳು ನಮಗೆ ಗೊತ್ತಿಲ್ಲ ಒಟ್ಟಿನಲ್ಲಿ ಹೇಳುವುದಾದರೆ ಮಹಾತ್ಮ ಬನವೇಶ್ವರರು ಮಹತ್ವದ ಕೆಲಸಗಳನ್ನು ನಡೆಸಿದವರು, ಚರಿತ್ರಾರ್ಹ ಪುರುಷರು ಮತ್ತು ಅವರ ಹೆಸರು ಈ ದೇಶದಲ್ಲಿ ಶಾಶ್ವತವಾಗಿದೆ ಅವರು ಇಡೀ ಪ್ರಪಂಚಕ್ಕೆ ಉನ್ನತವಾಗತಕ್ಕಂಥ ಕಾರ್ಯಕ್ರಮಗಳನ್ನು ತೆಗೆದುಕೊಂಡರು ಎನ್ನತಕ್ಕಂಥ ವಿಷಯ ನಮಗೆ ಗೊತ್ತಿದೆ. ಅದರ ಮಹತ್ವವೂ ಸಹ ಗೊತ್ತಿದೆ. ಅದರ ಸಾಧ್ಯಾಸಾಧ್ಯತೆಗಳನ್ನು ನಾವು ವಿಚಾರ ಮಾಡುತ್ತೇವೆಂದು ಈ ನಂದರ್ಭದಲ್ಲಿ ನಾನು ಹೇಳುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಅದರ ಸಾಧ್ಯಾಸಾಧ್ಯತೆಗಳನ್ನು ವಿಚಾರ ಮಾಡುವುದಕ್ಕೆ ಇನ್ನೂ ಎಷ್ಟು ಕಾಲ ತೆಗೆದುಕೊಳ್ಳಬಹುದು ? ಕೇರಳ, ತಮಿಳುನಾಡು ಅಂಧ್ರ ರಾಜ್ಯಗಳಲ್ಲಿ ಅಯಾ ರಾಜ್ಯಗಳ ಮುಖಾಪುರುಷರ ಜನ್ಮ ದಿನಾಚರಣೆಯನ್ನು ಅಧಿಕೃತ ರಜಾ ದಿನವನ್ನಾಗಿ ಆ ಸರ್ಕಾರಗಳು ಘೋಷಣೆ ಮಾಡಿರುವುದನ್ನು ತಾವು ಪರಿಗಣನೆಗೆ ತೆಗೆದುಕೊಂಡು ಇವತ್ತು ಅಥವಾ ನಾಳೆಯೊಳಗೆ ಈ ವಿಚಾರವನ್ನು ಇತ್ಯರ್ಥ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ —ಇಂಡಿಯಾ ಸರ್ಕಾರದವರು ವರ್ಷದಲ್ಲಿ ಎಷ್ಟು ದಿನಗಳು ರಜಾದಿನಗಳೆಂದು ಘೋಷಣೆ ಮಾಡುತ್ತಾರೆ. ಅದನ್ನು ನೋಡಿಕೊಂಡು ಅದರಲ್ಲಿ ಯಾವ ಯಾವ ದಿನಗಳನ್ನು ನಾವು ರಜಾದಿನಗಳೆಂದು ಘೋಷಣೆ ಮಾಡಬೇಕಾಗಿದೆ ಎಂಬುದನ್ನು ತಿಳಿಸಿಕೊಂಡು ನಮ್ಮ ಕರ್ನಾಟಕ ರಾಜ್ಯದ ಪ್ರತ್ಯೇಕ ಯಾವ ಯಾವ ಇನ್ಸ್‌ಟಿಟ್ಯೂಷನ್‌ನವರು ನಮಗೆ ಬರೆದಿದ್ದಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ನಾವು ಎಷ್ಟು ರಜಾ ದಿನಗಳನ್ನು ಕೊಡಬೇಕೆಂಬುದನ್ನು ನೋಡಿಕೊಂಡು, ಅಷ್ಟರೊಳಗೆ ಇದನ್ನೆಲ್ಲಾ ಆಳವಡಿಸಿಕೊಂಡು ಸಾಧ್ಯವಾದರೆ ಮಾಡುತ್ತೇವೆ

ಶ್ರೀ ಬಿ. ಎಂ ಹೊರಕೇರಿ.—ಏಪ್ರಿಲ್ ತಿಂಗಳಲ್ಲಿ ಬನಶಂಕರಿಯಾತ್ರೆಯನ್ನು ಮಾಡಬೇಕೆಂದು ಶಾಸಕರೆಲ್ಲಾ ಒಂದು ಮನವಿಯನ್ನು ಸಲ್ಲಿಸಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್.ಎಂ. ಚನ್ನಬಸಪ್ಪ.— ಬಂದಿದೆ.

ಶ್ರೀ ಎಸ್.ಪೈ. ಪಾಟೀಲ್.—ಮಹಾಪುರುಷರು ಒಂದೊಂದು ವಿಷಯದಲ್ಲೂ ಯಾವರೀತಿಯ ಚೆರ್ಚೆಯಿಲ್ಲದೇ ತಾವಾಗಿಯೇ ಅನೇಕ ವಿಚಾರಗಳನ್ನು ಜನತೆಗೆ ಬಿಚ್ಚಿದ್ದಾರೆ. ಆದರಂತೆ ದೇಶೋದ್ಧಾರ ಮಾಡಿದಂತಹ ಸಕಲ ಮಹಾಪುರುಷರ ವಿಷಯದಲ್ಲೂ ವಿಚಾರ ಮಾಡುವ ಅವಶ್ಯಕತೆ ಇರುವುದರಿಂದ ಸರ್ಕಾರ ಈ ಕೆಲಸವನ್ನು ತಾವಾಗಿಯೇ ಮಾಡಬೇಕು.

ಶ್ರೀ ಎಚ್ ಎಂ ಚನ್ನಬಸಪ್ಪ —ವಿಚಾರ ಮಾಡತಕ್ಕಂಥ ಅವಶ್ಯಕತೆ ಪ್ರತಿಯೊಂದು ವಿಷಯಕ್ಕೂ ಇದೆ.

ಶ್ರೀ ಎಸ್ ಪೈ ಪಾಟೀಲ್.—ಇದು ಸ್ಪಷ್ಟವಾಗಿ ಕಣ್ಣಿಗೆ ಕಾಣಿಸಿದರೂ ಚಸ್ಮ ಬೇರೆ ಏತಕ್ಕೆ ಬೇಕು ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಕಣ್ಣಿಗೆ ಕಂದರೂ ಶಾಸ್ತ್ರೀಯ ಕ್ರಮ ಅನುಸರಿಸಿ ಎಂದು ಹೇಳಿದ್ದಾರೆ

ಶ್ರೀ ಎಸ್.ಪೈ. ಪಾಟೀಲ್.—ವಿಧಾನಸಾಧದಲ್ಲಿ ಇದಕ್ಕೇ ಒಂದು ಎನ್‌ಕ್ವೈರಿ ಕಮಿಟಿ ಬೇಕೇನು ?

ಶ್ರೀ ಎಚ್.ಎಂ ಚನ್ನಬಸಪ್ಪ.—ಎಲ್ಲಾ ವಿಷಯ ಪ್ರತ್ಯಕ್ಷವಾಗಿ ಕಾಣುತ್ತಾ ಇದೆ.

Held over Question No. 237

re : Sites granted in Hassan City
(held over on 21-6-1977)

ಶ್ರೀ ಕೆ.ಹೆಚ್. ಹನುಮೇಗೌಡ —ಸ್ಟಾರ್ ಈ 1131 ಅಪ್ಲಿಕೇಷನ್‌ಗಳ ಪೈಕಿ 12 ಜನಕ್ಕೆ ನಿವೇಶನಗಳನ್ನು ಕೊಟ್ಟಿದೆ ಎಂದು ಉತ್ತರವಲ್ಲಿ ಬರೆದಿದೆ ಮುನಿಸಿಪಲ್ ಅಥಾರಿಟಿಯವರು ಸರ್ಕಾರಕ್ಕೆ ಶಿಫಾರಸು ಮಾಡಿದ್ದರ ಮೇಲೆ ಈ 122 ಜನಕ್ಕೆ ನಿವೇಶನಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆಯೇ ?